ಎ-330-(57)

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಅರುಣ ಶಹಾಪುರರವರು ನಿಯಮ-330ರಡಿ ನೀಡಿರುವ ಸೂಚನಾ ಪತ್ರಕ್ಕೆ ಸರ್ಕಾರದ ಉತ್ತರ**

**ವಿಷಯ:**

**ಖಾಸಗಿ ಅನುದಾನರಹಿತ ಹಾಗೂ ಅನುದಾನ ಸಹಿತ ಸ್ಥಳಾಂತರ ಹಾಗೂ ಹಸ್ತಾಂತರವಾದ ಶಾಲಾ ಹಾಗೂ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಕುರಿತು ಪ್ರಸ್ತಾಪಿಸಿರುತ್ತಾರೆ.**

**ಉತ್ತರ:**

ಕರ್ನಾಟಕ ಶಿಕ್ಷಣ ಕಾಯ್ದೆ-1983ರ ಕಲಂ-41(5)ರಡಿಯಲ್ಲಿ ರಚಿಸಲಾದ ಕರ್ನಾಟಕ ಶಿಕ್ಷಣ ಸಂಸ್ಥೆಗಳ(ಆಡಳಿತ ಪರಿಷತ್ತಿನ ಬದಲಾವಣೆ ಅಥವಾ ಖಾಸಗಿ ಶಿಕ್ಷಣ ಸಂಸ್ಥೆಗಳ ಸ್ಥಳ ಬದಲಾವಣೆ) ನಿಯಮ 2006ನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 13 ಎಸ್‌ಇಎಸ್ 2006, ದಿನಾಂಕ:17.04.2007ರಲ್ಲಿ ಜಾರಿಗೆ ತರಲಾಗಿದ್ದು, ಈ ನಿಯಮ 4ರ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಪರಿಷತ್ತಿನ ಬದಲಾವಣೆ ಷರತ್ತು 4ರಲ್ಲಿ ಮತ್ತು ನಿಯಮ 5 ಖಾಸಗಿ ಶಿಕ್ಷಣ ಸಂಸ್ಥೆಗಳ ಸ್ಥಳ ಬದಲಾವಣೆ ಷರತ್ತು 5 ರಲ್ಲಿ 'if the competent authority permits change in the governing council or change of location, a fresh application for registration and recognition shall be made as if it were a newly started institution,'

ಈ ನಿಯಮಗಳನ್ವಯ ಹಸ್ತಾಂತರ/ಸ್ಥಳಾಂತರಗೊಂಡ ಶಿಕ್ಷಣ ಸಂಸ್ಥೆಗಳನ್ನು ಹಸ್ತಾಂತರ ಮತ್ತು ಸ್ಥಳಾಂತರಗೊಂಡ ದಿನಾಂಕದಿಂದ ಹೊಸ ಶಾಲೆ ಎಂದು ಪರಿಗಣಿಸಲ್ಪಡುವುದರಿಂದ ವೇತನಾನುದಾನದ ಅರ್ಹತೆಯನ್ನು ಕಳೆದುಕೊಳ್ಳುತ್ತದೆ.

ಶಿಕ್ಷಣ ಕಾಯ್ದೆ ಕಲಂ 41(5)ರಲ್ಲಿ ಹಸ್ತಾಂತರ ಮತ್ತು ಸ್ಥಳಾಂತರ ಶಾಲೆಯನ್ನು ಹೊಸ ಶಾಲೆ ಎಂದು ಪರಿಗಣಿಸದಂತೆ ಹಿಂದಿನ ಅವಧಿಯನ್ನು ಪರಿಗಣಿಸಿ ವೇತನಾನುದಾನ ಮಂಜೂರು ಮಾಡುವಂತೆ ಕೆಲವು ಶಿಕ್ಷಣ ಸಂಸ್ಥೆಗಳು ಕೋರಿಕೆಯ ಹಿನ್ನಲೆಯಲ್ಲಿ ಕಲಂ 41(5)ರಡಿಯಲ್ಲಿ ಹೊಸ ಶಾಲೆಯೆಂದು ಪರಿಗಣಿಸುತ್ತಿರುವುದರ ಕ್ರಮ ಬದ್ಧತೆಯ ಬಗ್ಗೆ ಕಾನೂನು ಇಲಾಖೆಯೊಂದಿಗೆ ಸಮಾಲೋಚಿಸಲಾಗಿ ತನ್ನ ಅಭಿಪ್ರಾಯ ಸಂಖ್ಯೆ:ಲಾ 312 ಅಭಿಪ್ರಾಯ 2005, ದಿನಾಂಕ:22.08.2005ರಲ್ಲಿ ಕಡತ ಸಂಖ್ಯೆ:ಇಡಿ 8 ಎಸ್‌ಇಎಸ್ 2003ರಲ್ಲಿ ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತದೆ:-

"ಕರ್ನಾಟಕ ಶಿಕ್ಷಣ ಅಧಿನಿಯಮದ ಪ್ರಕರಣ 41(5)ರ ಅನ್ವಯ ಸ್ಥಳಾಂತರ/ಹಸ್ತಾಂತರಗೊಂಡ ಶಾಲೆಗಳು ಹೊಸ ಶಾಲೆಗಳೆಂಬಂತೆ recognition ಪಡೆಯಬೇಕಾಗುತ್ತದೆ. ಈಗಿರುವ ನಿಯಮದಂತೆ ಹೊಸ ಶಾಲೆಗಳು ಅನುದಾನಕ್ಕೆ ಅರ್ಹವಾಗುವುದಿಲ್ಲ. ಆದರೆ ಸ್ಥಳಾಂತರ ಅಥವಾ ಹಸ್ತಾಂತರಗೊಂಡ ಶಾಲೆಗಳು ಪ್ರಕರಣ 41(5)ರನ್ವಯ ಹೊಸದಾಗಿ recognition ಪಡೆದುಕೊಂಡಾಗ ಅವುಗಳನ್ನು ಹೊಸ ಶಾಲೆಗಳೆಂದು ಪರಿಗಣಿಸುವುದು ಸರಿಯಲ್ಲ. ಅವು ಹಳೆಯ ಶಾಲೆಗಳೇ. ಏಕೆಂದರೆ, ಪ್ರಕರಣ 41(5)ರಲ್ಲಿ "as if it were new school" ಎಂದು ಹೇಳಿರುವುದನ್ನು ಸೀಮಿತವಾಗಿ ಪರಿಭಾಷಿಸಿ recognition ಗಾಗಿ ಮಾತ್ರ ಹೊಸ ಶಾಲೆ ಎಂದು ಪರಿಗಣಿಸಬೇಕಾಗುತ್ತದೆ. ಇಲ್ಲದಿದ್ದರೆ "as if it were new school" ಎಂಬ ಬದಲು " as if a new school" ಎಂದು ಉಪಬಂಧಿಸಬಹುದಿತ್ತು. ಆದ್ದರಿಂದ ಸ್ಥಳಾಂತರ/ಹಸ್ತಾಂತರಗೊಂಡ ಶಾಲೆಗಳನ್ನು ಹೊಸ ಶಾಲೆಗಳೆಂದು ಪರಿಗಣಿಸುವುದು ಸರಿಯಲ್ಲ. ಈ ಗೊಂದಲವನ್ನು ನಿವಾರಿಸಲು ಕರ್ನಾಟಕ ಶಿಕ್ಷಣ ಅಧಿನಿಯಮಕ್ಕೆ ಸೂಕ್ತ ತಿದ್ದುಪಡಿ ಮಾಡಲು ಕ್ರಮ ತೆಗೆದುಕೊಳ್ಳಬಹುದು."

ಶಿಕ್ಷಕರ ಹಿತದೃಷ್ಟಿಯಿಂದ ಈ ಹಿಂದೆ ಹಸ್ತಾಂತರ ಮತ್ತು ಸ್ಥಳಾಂತರಗೊಂಡ ಶಾಲೆಗಳಿಗೆ ಶಿಕ್ಷಣ ಕಾಯ್ದೆಗೆ ತಿದ್ದುಪಡಿ ತರುವ ಷರತ್ತಿಗೊಳಪಟ್ಟು ಕೆಲವು ಶಿಕ್ಷಣ ಸಂಸ್ಥೆಗಳಿಗೆ ವೇತನಾನುದಾನವನ್ನು ನೀಡಲಾಗಿರುತ್ತದೆ. ಇದೇ ರೀತಿಯ ಹಸ್ತಾಂತರ ಮತ್ತು ಸ್ಥಳಾಂತರಗೊಂಡ ಶ್ರೀ ಕೃಷ್ಣ ಕನ್ನಡ ಮಾಧ್ಯಮ ಪ್ರೌಢಶಾಲೆಯ ವೇತನಾನುದಾನದ ಪ್ರಸ್ತಾವನೆಯನ್ನು ತಿರಸ್ಕರಿಸಿರುವುದನ್ನು ಸಂಸ್ಥೆ ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆ:55648 & 58296-58304/2016ರಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ:25.04.2017ರಂದು ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಿ ಸರ್ಕಾರದಿಂದ ರಚಿಸಲ್ಪಟ್ಟಿರುವ ನಿಯಮ ಮತ್ತು ಸುತ್ತೋಲೆಗಳನ್ನು ಎತ್ತಿ ಹಿಡಿದಿರುತ್ತದೆ. ಈ ಹಿನ್ನೆಲೆಯಲ್ಲಿ ಹಸ್ತಾಂತರ ಮತ್ತು ಸ್ಥಳಾಂತರಗೊಂಡ ಶಾಲೆಗಳಿಗೆ ವೇತನಾನುದಾನ ನೀಡಲಾಗುತ್ತಿಲ್ಲ. ಕರ್ನಾಟಕ ಶಿಕ್ಷಣ ಕಾಯ್ದೆ- 1983ರ ಕಲಂ 45(1)ಕ್ಕೆ ತಿದ್ದುಪಡಿ ತಂದು ಹಸ್ತಾಂತರ ಮತ್ತು ಸ್ಥಳಾಂತರಗೊಂಡ ಶಾಲೆಗಳಿಗೆ ವೇತನಾನುದಾನ ಕಲ್ಪಿಸುವ ಪ್ರಸ್ತಾವನೆಯಲ್ಲಿ ಕೈಗೊಳ್ಳುವ ಅಂತಿಮ ನಿರ್ಣಯದ ನಂತರ ಹಸ್ತಾಂತರ ಮತ್ತು ಸ್ಥಳಾಂತರಗೊಂಡ ಶಾಲೆಗಳಿಗೆ ವೇತನಾನುದಾನ ಕಲ್ಪಿಸುವ ಬಗ್ಗೆ ಪರಿಶೀಲಿಸಲಾಗುವುದು.

ಸರ್ಕಾರದ ಪತ್ರ ಸಂಖ್ಯೆ: ಇಡಿ 34 ಎಸ್‌ಇಎಸ್ 2019, ದಿನಾಂಕ:31.07.2019ರಲ್ಲಿ ಅನುದಾನಿತ ಶಾಲಾ ಕಾಲೇಜುಗಳು ಉತ್ತಮ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಳ್ಳುವ ದೃಷ್ಟಿಯಿಂದ ಸರ್ಕಾರದ ಪೂರ್ವಾನುಮತಿಯೊಂದಿಗೆ ಸ್ವಾಂತರಗೊಳ್ಳುವುದರಿಂದ, ಈಗಾಗಲೇ ವೇತನಾನುದಾನ ಪಡೆಯುತ್ತಿರುವ ಸ್ವಾಂತರದ ಶಾಲಾ ಕಾಲೇಜುಗಳ ಅನುದಾನಿತ ಸಿಬ್ಬಂಧಿಗಳ ವೇತನವನ್ನು ಮುಂದುವರೆಸುವಂತೆ ಮತ್ತು ಖಾಲಿ ಹುದ್ದೆಗಳ ಅನುದಾನಸಹಿತ ಭರ್ತಿಮಾಡಲು ಅವಕಾಶ ಕಲ್ಪಿಸಲಾಗಿದೆ.

ಸಂಖ್ಯೆ:ಇಪಿ 73 ಎಸ್‌ಇಎಸ್ 2021

(ಎಸ್. ಸುರೇಶ್ ಕುಮಾರ್ )
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ
ಸಕಾಲ ಸಚಿವರು